GOVERNMENT HIGHER SECONDARY SCHOOL

PAIVALIKE NAGAR, PAIVALIKE(PO)

Pin-671348, Ph: 04998206130, email: 11018paivalikenagar@gmail.com

# ದರ್ಪಣ

## LITTLE KITES SCHOOL MAGAZINE 2019-20

**DARPANA Little KITES School Magazine for the Year 2019-20**

**Edited and Published by LITTLE KITES, GHSS Paivalike Nagar**

**KITE MASTER: Chandrashekara. D, KITE MISTRESS: Raina Evet Dsouza**

**Editorial Board :**

**SHASHANK VS**

**LOHITH KUMAR**

**GOUTHAM S**

**NIRIKSHA**

**HARSHITHA AR**

**DEEPASHREE S**

**NAFEESATH SALEEMA**

**ABDUL RAHIMAN**

**FATHIMA HANA**

**AYSHATH MALUFA**

**VEEKSHITHA GA**

**TEJASH A**

**MOHAMMED SINAN**

**AHAMMAD KABEER MA**

**MOHAMMAD MUHAZ CH**

**MOHAMMED MEHRU ROSHAN NM**

**MOHAMMED ASHIF**

**MOHAMMED ALTHAF**

**FATHIMATH MUNSEENA**

**FATHIMATH NAUFA**

**Technical Support: Praveen Kaniyala**

# ಅತಿ ಆಸೆ ಗತಿಗೇಡು

ಒಂದೂರಿನಲ್ಲಿ ಒಂದು ಪುಟ್ಟ ಗ್ರಾಮವಿತ್ತು.ಆ ಗ್ರಾಮದ ನಾಯಕ ಅಶೋಕನಾಗಿದ್ದನು.ಅವನಿಗೆ ಎರಡು ಮುದ್ದಿನ ಮಕ್ಕಳಿದ್ದರು. ಅಶೋಕನಿಗೆ ತನ್ನಲ್ಲಿ ಇಲ್ಲದಿದ್ದರೂ ಬೇರೆಯವರ ಹಣವನ್ನು ಕಿತ್ತುಕೊಳ್ಳುವ ಅಹಂಕಾರ.   ಅವನು ಬಡವರ ಮತ್ತು ಭಿಕ್ಷುಕರ ಹಣವನ್ನು ಲಪಟಾಯಿಸಿ ಮನೆಯಲ್ಲಿ ಸಂಗ್ರಹಿಸಿ ಇಡುತ್ತಿದ್ದನು.ಹೀಗಿರಲು ಒಂದು ದಿನ ರಾತ್ರೆ ಅಶೋಕನ ಮನೆಗೆ ಬೇರೊಬ್ಬ ಕಳ್ಳ ಲಗ್ಗೆ ಇಟ್ಟು ಅಶೋಕ ಸಂಗ್ರಹಿಸಿಟ್ಟದ್ದನ್ನೆಲ್ಲ ಕೊಂಡು ಹೋದ.ಮರುದಿನ ಬೆಳಗ್ಗೆ ನೋಡಿದಾಗ ಅಶೋಕನ ಮನೆ ಖಾಲಿಯಾಗಿತ್ತು.ಇದರಿಂದ ಅಶೋಕನಿಗೆ ಬೇಸರವಾಗಿ ಅವನು ಕಳ್ಳತನ ಮಾಡಿದ ಮನೆಯವರ ಮನಸ್ಸು ಅರ್ಥವಾಯಿತು.   ಅಂದಿನಿಂದ ಅಶೋಕ ಕಳ್ಳತನವನ್ನು ಬಿಟ್ಟು ಒಳ್ಳೆಯವನಾಗಿ ಬಾಳಿದ.

**(ಮೋನಿಕ 7 ಸಿ)**

# ಗಾದೆ ಮಾತುಗಳು

1.ಮಕ್ಕಳೇ ಮನೆಗೆ ಮಾಣಿಕ್ಯ

2 ಮೂಗಿಗಿಂತ ಮೂಗುತ್ತಿ ಭಾರ

3 ಇಂದಿನ ಮಕ್ಕಳೇ ಮುಂದಿನ ಜನಾಂಗ

4.ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖ ಇಲ್ಲ

5 ತುಂಬಿದ ಕೊಡ ತುಳುಕುವುದಿಲ್ಲ.

6 ಮನೆಗೊಂದು ಮರ ಊರಿಗೊಂದು ವನ

7 ವೇದ ಸುಳ್ಳಾದರೂ ಗಾದೆ ಸುಳ್ಳಾಗದು.

8.ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.

9.ಹಣಕ್ಕಿಂತ ಗುಣವೇ ಮುಖ್ಯ.

10.ಅನ್ನದ ಮಹತ್ವ ಹಸಿದವನಿಗೆ ಮಾತ್ರ ಗೊತ್ತು.

(ಪ್ರಜೇಶ್ 7 ಸಿ)

# ವಿದ್ಯೆಯ ಮಹತ್ವ

ವಿದ್ಯೆಯ ಮಹತ್ವ

ತಿಳಿಯಲೆ ಬೇಕು

ವಿದ್ಯೆಯ ಕಲಿಯಲು

ಶ್ರದ್ಧೆಯು ಬೇಕು

ಶ್ರದ್ಧೆಯ ಜೊತೆಯಲಿ

ಶಿಸ್ತಿರಬೇಕು

ಸಮಯದ ಮಹತ್ವ ಅರಿತಿರಬೇಕು.

ಅರಿತವರಿಂದ ಕಲಿಯಲು ಬೇಕು

ಬಲ್ಲವರಿಂದ ತಿಳಿಯಲು ಬೇಕು

ಜ್ಞಾನವ ಪಡೆಯಲು ವಿದ್ಯೆಯು ಬೇಕು

ಲೋಕದ ಜ್ಞಾನವ ಪಡೆಯಲು ಬೇಕು

ಸತ್ಕ್ರಿಯೆಸಗಲು ವಿದ್ಯೆಯೇ ದಾರಿ

ವಿದ್ಯೆಯಿಲ್ಲದವನ ಬಾಳು ಕತ್ತಲ ದಾರಿ

ಅನೇಕ ಸಮಸ್ಯೆಗಳು ಸವಕಲು ದಾರಿ

ಮುಕ್ತಿಯ ಹೊಂದಲು ವಿದ್ಯೆಯೇ ರಹದಾರಿ.

**(ಅಶ್ವಿತ 7 ಸಿ ತರಗತಿ)**

## **The Little Plant**

In the heart of a seed

Buried deep so deep.

A dear little plant

Lay fast asleep.

'Wake' said the sunshine

And creep to the light.

'Wake' said the voice

Of the rainbows bright

The little plant heard it

And rose to see

What a wonderful outside

World might be!

(Dhanyashree N.S  7 C)

# GOD

Thank you god
for the world so sweet
Thank you god
for the food we eat.
Thank you god
for the birds that sing
Thank you god for everything.

**(Ashwitha 7.C)**

# ರಸಪ್ರಶ್ನೆಗಳು

1.ಮೂರು ಸೇನೆಗಳ ಮಹಾದಂಡನಾಯಕ ಯಾರು?

2 ಕನ್ನಡದಲ್ಲಿ ವಚನಭಾರತ ಬರೆದವರು ಯಾರು?

3.ವಿಶ್ವಭಾರತಿಯನ್ನು ಸ್ಥಾಪಿಸಿದವರು ಯಾರು?

4.ಮಾಸ್ತಿ ವೆಂಕಟೇಶ ಅಯ್ಯಂಗಾರರ ಜ್ಞಾನಪೀಠ ಪ್ರಶಸ್ತಿ ಪಡೆದ ಕೃತಿ ಯಾವುದು?

5.ಉಪರಾಷ್ಟ್ರಪತಿ ಹುದ್ದೆಯ ಅವಧಿ ಎಷ್ಟು?

ಉತ್ತರಗಳು

1 ರಾಷ್ಟ್ರಪತಿ

2 ಎ.ಆರ್ ಕೃಷ್ಣಶಾಸ್ತ್ರಿ

3 ರವೀಂದ್ರನಾಥ ಟಾಗೋರ್

4.ಚಿಕ್ಕವೀರ ರಾಜೇಂದ್ರ

5.ಐದು ವರ್ಷ.

( ಸಂಗ್ರಹ:ಧನ್ಯಶ್ರೀ ಎನ್ ಯಸ್ 7 ಸಿ)

# ಒಗಟುಗಳು

1.ಕಿತ್ತರೆ ಬಾಡುವುದಿಲ್ಲ,ನೆಟ್ಟರೆ ಬೆಳೆಯುವುದಿಲ್ಲ.

2.ಹಸಿರು ಬಾವಿಯಲ್ಲಿ ಸಿಹಿ ನೀರು?

3.ಐದು ಮನೆಗೆ ಒಂದೇ ಅಂಗಳ

4.ಚಂದ್ರನಂತೆ ಉರುಟಾಗಿದೆ,ತಿನ್ನಲು ಬಲು ರುಚಿ?

5 ಎರಡು ಮನೆಗೆ ಒಂದೇ ಬಾಗಿಲು?

ಉತ್ತರಗಳು.

1.ಉಗುರು,ಕೂದಲು

2.ಎಳೆನೀರು

3.ಅಂಗೈ

4.ಹಪ್ಪಳ

5.ಮೂಗು.

(ಸಂಗ್ರಹ: ಮೋನಿಕ 6 ಸಿ.)

# ನಮ್ಮ ನಾಡು ಭಾರತ

ನಮ್ಮ ನಾಡು ಭಾರತ

ನಮ್ಮ ನೆಲೆಯು ಭಾರತ

ಅಮರವೆಮ್ಮ ಭಾರತ

ಭವ್ಯ ದಿವ್ಯ ಭಾರತ

ಗಂಗಾ ಗೋದಾವರಿ

ತುಂಗಾ ಸರಸ್ವತಿ

ಕೃಷ್ಣ ಕಾವೇರಿ ಹರಿವ

ಪುಣ್ಯ ಭೂಮಿ ಭಾರತ.

ನಭದಗಲ ಹಿಮಾಲಯ

ವಿಂಧ್ಯ ಪರ್ವತಾಲಯ

ಋಷಿ ಮುನಿಗಳ ಆಶ್ರಯ

ದಿವ್ಯ ಭೂಮಿ ಭಾರತ

(ಧನ್ಯಶ್ರೀ. ಎನ್. ಎಸ್ 7 ಸಿ)

# ನಮ್ಮ ಕೇರಳ ನಾಡು

ತೆಂಗಿನ ಮರಗಳು ಇರುವ ನಾಡು
ಅದುವೇ ನಮ್ಮಯ ಕೇರಳ ನಾಡು
ಹಲವು ಮರಗಳು ಬೆಳೆಯುವ ನಾಡು
ಸುಂದರ ನಮ್ಮಯ ಕೇರಳ ನಾಡು.
ಎಲ್ಲಾ ಕೃಷಿಗಳನು ಮಾಡುವ ನಾಡು
ಕೇರಳವೇ ಒಂದು ಸುಂದರ ನಾಡು.
ಹಲವು ಕಲೆಗಳ
ಸಂಗಮ ನಾಡು
ಕೇರಳ ನೋಡಲು ಸುಂದರ ನಾಡು
ಸಾಗರ ತೀರದಿ
ನೆಲೆಸಿಹ ನಾಡು
ಸುಂದರ ಕೇರಳ ನಮ್ಮಯ ನಾಡು.

(ಅಶ್ವಿತ 7 ಸಿ. )

# **Pretty Flowers**

Flowers have opened

Petals wide

Stars have gone

Away to hide

Pussy is sleeping

On the stool

It is time to go to school.

**(Ashwitha 7 C)**

# ಒಗಟುಗಳು

1.ಹೋಗುವಾಗ ಮೂರು ಮಂದಿ ಬರುವಾಗ ಒಬ್ಬನೇ?

2.ಐದು ಮನೆಗೆ ಒಂದೇ ಅಂಗಳ

3.ಹಸಿರು ಬಸ್ಸು ಕೆಂಪು ಸೀಟು ಕಪ್ಪು ಜನರು

4 ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ

5.ಹೋಗುವಾಗ ಒಬ್ಬ ಬರುವಾಗ ಸಾವಿರ ಮಂದಿ?

ಉತ್ತರಗಳು.

1.ಅಡಿಕೆ ಸುಣ್ಣ ವೀಳ್ಯದೆಲೆ.

2 ಅಂಗೈ

3.ಕಲ್ಲಂಗಡಿ

4 .ಮಲ್ಲಿಗೆ

5.ಸೇಮಿಗೆ

(ಅಂಕಿತ 6.ಸಿ)

# ನಮ್ಮಯ ಶಾಲೆ

ಎಲ್ಲರ ಮೆಚ್ಚಿನ ಶಾಲೆ

ಕಲಿಕೆ ಕ್ರೀಡೆಗಳ ಶಾಲೆ

ಸುಂದರ ಹೂದೋಟ

ಇರುವ ಶಾಲೆ

ನಮ್ಮಯ ನೆಚ್ಚಿನ ಶಾಲೆ

ಪೈವಳಿಕೆ ನಗರವೇ

ಈ ಶಾಲೆ........

ತುಂಬ ಮಕ್ಕಳಿರುವ ಶಾಲೆ

ದೊಡ್ಡ ಮೈದಾನದ ಶಾಲೆ

ಪೇಟೆಯ ಮಧ್ಯ

ಇರುವ ಶಾಲೆ

ಪೈವಳಿಕೆ ನಗರವೇ

ಈ ಶಾಲೆ........

**(ರಚನೆ : ಧನ್ಯಶ್ರೀ . ಎನ್ . ಎಸ್ 7 ಸಿ)**

# ಓದಿನ ಟಿಪ್ಪಣಿ

ನನಗೆ ಶ್ರೀಕೃಷ್ಣ ಲೀಲೆ ಎಂಬ ಪುಸ್ತಕವು ತುಂಬಾ ಇಷ್ಟವಾಯಿತು. ಯಾಕೆಂದರೆ ಇದರಲ್ಲಿ ಕೃಷ್ಣನ ಚರಿತ್ರೆಯನ್ನು ಸ್ವಾರಸ್ಯಕರವಾಗಿ ಹೇಳಲಾಗಿದೆ.ಈ ಪುಸ್ತಕವನ್ನು ಐಜನ್ ಬಿ ಎ0ಬವರು ಬರೆದಿದ್ದಾರೆ. ಇದರಲ್ಲಿ ಕೃಷ್ಣನ ಬಾಲ್ಯದ ತುಂಟಾಟಗಳು ಇವೆ.ಕೃಷ್ಣನು ದೊಡ್ಡವನಾದ ಮೇಲೆ ಮಾಡಿದ ಸಾಹಸಗಳ ಕುರಿತು ಇದೆ .ಇದು ಒಂದು ಮನಮೋಹಕ ಕಥೆ ಎನ್ನಬಹುದು .ನನಗೆ ತುಂಬಾ ಇಷ್ಟವಾದ ಭಾಗ ಎಂದರೆ ಕೃಷ್ಣ ಬೆಣ್ಣೆ ಕದ್ದು ತಿನ್ನುತ್ತಿದ್ದುದು.ಆಸಕ್ತಿ ಇರುವವರು ಖಂಡಿತವಾಗಿಯೂ ಈ ಪುಸ್ತಕವನ್ನು ಓದಲೇಬೇಕು.

(ಧನ್ಯಶ್ರೀ . ಎನ್ . ಎಸ್ 7 ಸಿ)

# ಪ್ರಕೃತಿ

ಪ್ರಕೃತಿಯೇ ಮಾನವನಿಗೆ ಅಪೂರ್ವ ಕೊಡುಗೆ

ಪಶು ಪಕ್ಷಿ ಸಂಕುಲ ನಡೆದಿದೆ ವಿನಾಶದ ಕಡೆಗೆ

ಮರ ಗಿಡಗಳ ರೋಧನ

ಯಾರಿಗಿಗದೆ ಇದರ ಮನನ

ಸಂಕಷ್ಟಕ್ಕೆ ಸಿಲುಕಿದೆ ಕಾನನ

ಎಲ್ಲಾ ಕಡೆ ನಡೆದಿದೆ ಇದರ ದಹನ

ಕಾಡು ಉಳಿದರೆ ನಾಡೆಂಬ ಸತ್ಯ

ಅಮೂಲ್ಯ ಸಸ್ಯ ಸಂಪತ್ತಿನ ರಹಸ್ಯ

ಅರಿವಿಗೆ ಬರದೇ ಬಂದಿದೆ ಅಂತ್ಯ

ಈ ಎಲ್ಲಾ ಅನಿಸಿಕೆಗಳು ಮಿಥ್ಯ

ಮನುಕುಲಕೆ ಬೇಕಾಗಿದೆ ಪ್ರಕೃತಿಯ ಅನುಬಂಧ

ಕಳಚಿಕೊಂಡರೆ ಅದರ ಸಂಬಂಧ

ನಮ್ಮೊಂದಿಗೆ ಇರಲಾರದು ಅದರ ಸಾಮರಸ್ಯ

ನಾವೀಗ ಚಿಂತಿಸಲೇಬೇಕಾಗಿದೆ ಅದರ ಮಹತ್ವ

(ಧನ್ಯಶ್ರೀ . ಎನ್ . ಎಸ್ 7C)

# ಒಗಟುಗಳು

1.ಒಂದು ಕುಪ್ಪಿಯಲ್ಲಿ ಎರಡು ತರದ ಔಷಧಿ

2.ದೆಹಲಿಯಲ್ಲಿ ನೆಟ್ಟ ಗಿಡ ಊರೆಲ್ಲಾ ಹರಡಿತು

3.ಚಿನ್ನವನ್ನು ಬಿಸಾಡಿ ಬೆಳ್ಳಿಯನ್ನು ನುಂಗುತ್ತಾರೆ

4.ಕಣ್ಣಿಗೆ ಕಾಣುವುದಿಲ್ಲ, ಕೈಗೆ ಸಿಗುವುದಿಲ್ಲ,ನಾನಿಲ್ಲದೆ ಜೀವಿಸಲು ಸಾಧ್ಯವಿಲ್ಲ

5.ನಾವು ಬಂದ ಕಡೆ ಬರುತ್ತೆ , ಕಣ್ಣಿಗೆ ಕಾಣುತ್ತೆ ಕೈಗೆ ಸಿಗುವುದಿಲ್ಲ .ಹಾಗಾದರೆ ನಾನು ಯಾರು

6.ದೊಡ್ಡ ಹೊಟ್ಟೆ ಹೈದನಿಗೆ ಮುಂದೆಯೂ ಬಾಲ ಹಿಂದೆಯೂ ಬಾಲ

7.ತಾತನ ಹೊಟ್ಟೆಯಲ್ಲಿ ಮೊಮ್ಮಗ ನೇತಾಡುತ್ತಾನೆ.

ಉತ್ತರಗಳು

1.ಮೊಟ್ಟೆ 2.ವಿದ್ಯುತ್ 3.ಬಾಳೆಹಣ್ಣು 4.ಗಾಳಿ 5.ನೆರಳು 6.ಆನೆ 7.ಗೇರುಹಣ್ಣು.

# ಗಾದೆ ಮಾತುಗಳು.

1.ಕೈ ಕೆಸರಾದರೆ ಬಾಯಿ ಮೊಸರು

2.ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಿತೇ

3.ಕಾಯಕವೇ ಕೈಲಾಸ

4.ಉಪ್ಪಿಗಿಂತ ರುಚಿ ಇಲ್ಲ,ತಾಯಿಗಿಂತ ಬಂಧು ಇಲ್ಲ

5.ಊರಿಗೆ ಆರಸನಾದರೂ ತಾಯಿಗೆ ಮಗ

6.ಹೆತ್ತವರಿಗೆ ಹೆಗ್ಗಣ ಮುದ್ದು

7.ಅತಿ ಆಸೆ ಗತಿಗೇಡು

8.ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

10.ಮನಸ್ಸಿದ್ದರೆ ಮಾರ್ಗವಿದೆ.

ಕೆ.ಶಿವಾನಿ

7.ಎ ತರಗತಿ.

# ಒಗಟುಗಳು

1. ಬೇಯಿಸಿ ಬೆಂಡಾದರೂ ಬಲ ಮಾತ್ರ ಹೋಗಲ್ಲ.

2.ನಾನು ಇರುವ ಬಣ್ಣ ಕೆಂಪು.ನಾನು ಹೋದ ಜಾಗವೆಲ್ಲ ಕಪ್ಪು.

3.ಕಾಡಿನಲ್ಲಿ ಹುಟ್ಟುವೆನು,ಕಾಡಿನಲ್ಲಿ ಬೆಳೆಯುವೆನು,ಕಡಿದಲ್ಲಿ ಕಂಪ ಸೂಸುವೆನು

4. ನೀಲ ಕೆರೆಯಲ್ಲಿ ಎಣಿಸಲಾಗದಷ್ಟು ಮೀನು.

5. ಅಂಗಿ ತೆಗೆದು ಬಾವಿಗೆ ಹಾರು.

ಉತ್ತರಗಳು.

1.ಮೆಣಸಿನ ಕಾಯಿ

2.ಬೆಂಕಿ

3.ಶ್ರೀಗಂಧ

4.ನಕ್ಷತ್ರ

5.ಬಾಳೆಹಣ್ಣು

ಜಿತೇಂದ್ರಿಯ

5 ಎ ತರಗತಿ

# ದೋಸೆ

ಚುಯಿಂ ಚುಯಿಂ ದೋಸೆ

ಗುಳ್ಳೆ ಬರುವ ದೋಸೆ

ತೂತು ಇರುವ ದೋಸೆ

ಉರುಟು ಉರುಟು ದೋಸೆ

ಬಿಳಿ ಬಿಳಿ ದೋಸೆ

ರುಚಿ ರುಚಿ ದೋಸೆ

ನನ್ನ ಇಷ್ಟದ ದೋಸೆ

ತಿನ್ನಲು ತುಂಬಾ ಆಸೆ.

ಅಬಿನಂದನ್ 7 ಎ.

# ನನ್ನ ಅಪ್ಪ

ಅಪ್ಪ ಅಪ್ಪ ನನ್ನಪ್ಪ

ಪ್ರೀತಿಯ ಸುರಿಸುವ

ನನ್ನಪ್ಪ

ಸ್ಲೇಟ್ ಪೆನ್ಸಿಲ್ ಪುಸ್ತಕ

ಕೊಡುವನು ನನ್ನಪ್ಪ

ಒಳ್ಳೆಯದನ್ನೇ ಹೇಳುವ

ನನ್ನಪ್ಪ

ಮಕ್ಕಳಿಗಾಗಿ ತ್ಯಾಗವ

ಮಾಡುವ ನನ್ನಪ್ಪ.

ಖದೀಜತ್ ಸನ 5 ಎ.

# ರಸಪ್ರಶ್ನೆ

1.ವಂದೇ ಮಾತರಂ ಮೊದಲ ಬಾರಿಗೆ ಹಾಡಿದ್ದು ಯಾವಾಗ?

2.ವನಿತಾ ದಿನ ಯಾವಾಗ?

3.ಕೇರಳದಲ್ಲಿ ಹೆಚ್ಚು ಶಾಲೆಗಳಿರುವ ಜಿಲ್ಲೆ ಯಾವುದು?

4.ನೀಲ ರಕ್ತವುಳ್ಳ ಜೀವಿ ಯಾವುದು?

5.ದೇಶೀಯ ಗಾನ ಹಾಡಲಿರುವ ಸಮಯ ಎಷ್ಟು?

ಉತ್ತರಗಳು.

1.1896

2. ಮಾರ್ಚ್ 8

3.ಮಲಪ್ಪುರಂ

4.ಸಿಗಡಿ

5.ಐವತ್ತೆರಡು ಸೆಕೆಂಡ್.

ಅಶ್ವಿನಿ 5 ಎ.

# ಒಂದೇ ತಾಯಿ

ಒಂದೇ ತಾಯಿಯ ಮಕ್ಕಳು ನಾವು
ಆಡುತ ಕಲಿಯುತ
ಸಾಗುವೆವು
ಒಳ್ಳೆಯ ಕೆಲಸವ ಮಾಡುತ ನಾವು
ಗೌರವವನ್ನು ಗಳಿಸುವೆವು.
ಬಿದ್ದವರನ್ನು ಮೇಲೆತ್ತಿ
ಮಾನವೀಯತೆ ಮೆರೆಯುವೆವು.
ಒಂದೇ ಉಸಿರಲಿ ಬೆಳೆಯುತ ನಾವು
ಒಳ್ಳೆಯ ಮಾನವರಾಗುವೆವು.
ಮಾತೆ ಒಬ್ಬರೇ

ಮಮತೆ ಒಂದೇ
ಎನ್ನುತ ನಾವು
ಒಂದಾಗಿ ಬಾಳುವೆವು.
ತಾಯಿಯೇ ನಮಗೆ
ದಾರಿದೀಪವು
ಅವರೇ ನಮಗೆ
ಎಲ್ಲವೂ.

(ಕೆ.ಶಿವಾನಿ 7 ಎ )

# ರಸಪ್ರಶ್ನೆಗಳು

1. ಪರಶುರಾಮನಿಗೆ ಶಾಪ ನೀಡಿದ ಗುರು ಯಾರು?

2. ಯಕ್ಷನ ಪ್ರಶ್ನೆಗೆ ಉತ್ತರಿಸಿದ ಪಾಂಡವರು ಯಾರು?

3.ದಕ್ಷ ಬ್ರಹ್ಮನ ಮಗಳು ಯಾರು?

4.ಇಂದ್ರನ ವಾಹನವಾದ  ಬಿಳಿಯ ಆನೆಯ ಹೆಸರೇನು?

5.ಭಕ್ತ ಪ್ರಹ್ಲಾದನ ತಂದೆಯ ಹೆಸರೇನು?

6.ಭರತನ ತಾಯಿಯ ಹೆಸರೇನು?

7.ಮೂರು ಕಣ್ಣುಗಳನ್ನು ಹೊಂದಿದ ದೇವನಾರು?

ಉತ್ತರಗಳು

1.ವಿಶ್ವಾಮಿತ್ರ

2.ಧರ್ಮರಾಜ

3.ದಾಕ್ಷಾಯಿಣಿ

4.ಐರಾವತ

5.ಹಿರಣ್ಯ ಕಶುಪು

6.ಕೈಕೇಯಿ

7.ಪರಮೇಶ್ವರ.

ಧನ್ಯಶ್ರೀಎನ್.ಎಸ್ 7 ಸಿ

# Golden Rules

Breath fresh air

Play in the open air

Drink pure water

Eat food good.

Wear clean clothes

Take exercise daily

Take rest and sleep well.

(Dhanyashree N.S 7C)

# <u>ಮೊಸರು ಕುಡಿಕೆ</u>

ಜನರಿಗೊಂದು ಉತ್ಸವ

ಕಂಬವನ್ನೇರುವ ಉತ್ಸವ

ಯುವಕರೆಲ್ಲ ಬಂದುಸೇರಿ

ಬನ್ನಿ ಮಡಕೆಯೊಡೆಯುವ.

ಮನದಿ ಖುಷಿಯ ಪಡೆದುಕೊಂಡು

ಉತ್ಸವದಿ ನಾವು

ಭಾಗವಹಿಸುವ.

ನಾವೆಲ್ಲ ಒಂದು ಎಂದು

ಊರಿಗೆ ಸಾರುವ.

ಧನ್ಯಶ್ರೀ ಎನ್ ಎಸ್ 7ಸಿ

## ರಸಪ್ರಶ್ನೆಗಳು

1. ಕೇರಳದ ರಾಜಧಾನಿ ಯಾವುದು?

2. ಕರ್ನಾಟಕದ ರಾಜಧಾನಿ ಯಾವುದು?

3.ಕೇರಳದ ಪ್ರಧಾನ ಕಲೆ ಯಾವುದು?

4.ಕೇರಳದಲ್ಲಿರುವ ಜಿಲ್ಲೆಗಳೆಷ್ಟು?

5.ಕ್ವಿಟ್ ಇಂಡಿಯಾ ದಿನ ಯಾವಾಗ?

6.ತ್ಸುನಾಮಿ ಯಾವ ಭಾಷೆಯ ಪದ?

7.ಪ್ರಪಂಚದ ಅತ್ಯಂತ ದೊಡ್ಡ ಲೋಳೆ ಮೀನು ಯಾವುದು?

8.ಅತ್ಯಂತ ದೊಡ್ಡ ಹಕ್ಕಿ ಯಾವುದು?

ಉತ್ತರಗಳು.

1.ತಿರುವನಂತಪುರ

2.ಬೆಂಗಳೂರು

3.ಕಥಕ್ಕಳಿ

4.ಹದಿನಾಲ್ಕು

5.ಅಗೋಸ್ತು 9

6.ಜಪಾನಿ

7.ಸ್ಯೈಯಾನಿಯಾ

8.ಉಷ್ಟ್ರಪಕ್ಷಿ.

ಅಶ್ವಿನಿ 5 ಎ.

# ರಸಪ್ರಶ್ನೆಗಳು

1.ಸತ್ಯಮೇವ ಜಯತೇ ಎಂಬ ವಾಕ್ಯವನ್ನು ಯಾವ ಉಪನಿಷತ್ತಿನಿಂದ ಆರಿಸಲಾಗಿದೆ?

2.ಸೈಮನ್ ಆಯೋಗ ಮೊದಲ ಬಾರಿಗೆ ಭಾರತಕ್ಕೆ ಭೇಟಿ ನೀಡಿದ್ದು ಯಾವಾಗ?

3.ಬ್ರಿಟಿಷ್ ಪ್ರಧಾನಮಂತ್ರಿ ಅರೆನಗ್ನ ಫಕೀರ ಎಂದು ಯಾರನ್ನು ಕರೆದರು?

4.ಸಂಗಂ ಸಾಹಿತ್ಯ ಭಾರತದ ಯಾವ ಜಿಲ್ಲೆಯಲ್ಲಿ ಕಾಣಿಸಿಕೊಂಡಿತು?

5.ನಾಡೋಜ ಕವಿ ಯಾರು?

ಉತ್ತರಗಳು.

1. ಮಂಡಕೋಪನಿಷತ್ತು

2.1928

3.ಮಹಾತ್ಮ ಗಾಂದಿ

4.ತಮಿಳುನಾಡು

5.ಕಯ್ಯಾರ ಕಿಞಣ್ಣ ರೈ.

ಚೈತ್ರ 5 .ಎ



–ಮುಕೇಶ್ ಕೆ, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ವಿಕಾಸ್ ಪಿ.ಎಸ್, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ




–ಕೌಶಿಕ್ ಕೆ, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ




–ಪವನ್‌ರಾಜ್ ಸಿ.ಎಚ್, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ




–ಅಭಿನಂದನ್ ಪಿ, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ಶ್ರವಣ ಸಿ.ಎಚ್, 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ಹರ್ಷಲತ ಎಸ್., 9ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ಹರ್ಷಕುಮಾರ್ 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ಶ್ರೀಪ್ರಿಯ 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



–ಫಾತಿಮತ್ ರಿಧಾ 8ನೇ ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ

# ಐಕ್ಯ ಮಂತ್ರ



ಬನ್ನಿರಿ ಪ್ರಜೆಗಳೆ ಐಕ್ಯವ ರಚಿಸುವ
ದೇಶ ಸೇವೆಗೆ ತೊಡಗೋಣ
ವೇಷ ಭೂಷಣಗಳು ಹಲವಾರಿದ್ದರೂ
ಒಂದೇ ಎನ್ನುತ ಬಾಳೋಣ
ಹಲವು ಜಾತಿಗಳಿರಲಿ ಹಲವು ಧರ್ಮಗಳಿರಲಿ
ಭೇದ ತೋರದೇ ನಡೆಯೋಣ
ಮಾತೆ ಒಂದೇ ಮಕ್ಕಳು ಒಂದೇ
ಎಂಬ ಘೋಷವನು ಸಾರೋಣ
ಐಕ್ಯಮಂತ್ರವ ಸಾರುತ ನಾವು
ನವ ಭಾರತವ ಕಟ್ಟೋಣ...

–ಕೆ. ಶಿವಾನಿ, 7ನೇ ತರಗತಿ ಜಿಎಸ್ಎಸ್ಎಸ್ ಪೈವಳಿಕೆನಗರ

# ಇಬ್ಬರು ಗೆಳೆಯರು

-ಮೊಹಮ್ಮದ್ ಮುಬಾರಕ್,
*8ನೇ ತರಗತಿ, ಜಿಎಚ್‌ಎಸ್‌ಎಸ್ ಪೈವಳಿಕೆನಗರ*

ಒಂದು ಊರಿನಲ್ಲಿ ಮನು ಮತ್ತು ರವಿ ಎಂಬ ಇಬ್ಬರು ಗೆಳೆಯರಿದ್ದರು. ಅವರು ಶಾಲೆಗೆ ಜತೆಯಾಗಿ ಹೋಗುತ್ತಿದ್ದರು. ಅವರು ಒಂದು ದಿನ ಶಾಲೆಗೆ ಹೋಗುವ ದಾರಿಯಲ್ಲಿ ಒಬ್ಬ ಹುಡುಗ ಸೈಕಲ್ ತುಳಿದುಕೊಂಡು ಶಾಲೆಗೆ ಹೋಗುವುದನ್ನು ಕಂಡರು. ಅದನ್ನು ಕಂಡು ಅವರಿಗೆ ನಾವು ಹೀಗೆ ಸೈಕಲ್‌ನಲ್ಲಿ ಹೋಗಿದ್ದರೆ ಒಳ್ಳೆಯದಿತ್ತು ಎಂದು ಅನಿಸಿತು.


ಶಾಲೆಯಿಂದ ಸಂಜೆ ಹಿಂತಿರುಗಿ ಬರುವಾಗ ಅದೇ ಚಿಂತೆ ಇತ್ತು. ಮನು ಹೇಳಿದ 'ನಾವು ಅಪ್ಪನಲ್ಲಿ ಸೈಕಲ್ ತೆಗೆದು ಕೊಡಲು ಹೇಳಿದರೇನು?' ಆಗ ರವಿ ಹೇಳಿದ "ಆಗಬಹುದು ಕೇಳಿ ನೋಡೋಣ" ರವಿಯ ಮನೆಯವರು ಬಡವರಾಗಿದ್ದರು. ಮನುವಿನ ಮನೆಯವರು ಶ್ರೀಮಂತರಾಗಿದ್ದರು. ರವಿ ಮನೆಗೆ ಹೋಗಿ ಅವನ ಅಪ್ಪನಲ್ಲಿ ಈ ವಿಷಯವನ್ನು ಹೇಳಿದನು. ಆಗ ಅಪ್ಪ ಹೇಳಿದರು ಆದರೆ "ಸೈಕಲ್ ತೆಗೆಯುವ ಹಣ ನನ್ನಲ್ಲಿಲ್ಲವಲ್ಲ" ಎಂದು. ಮನುವಿನ ಮನೆಯವರು ಅವನು ಕೇಳುವಾಗಲೇ ತೆಗೆದು ಕೊಡುವ ಎಂದು ಹೇಳಿದರು. ಆಗ ಮನುವಿಗೆ ಸಂತೋಷವಾಯಿತು. ಆದರೆ ರವಿಗೆ ಬೇಸರವಾಯಿತು. ಮರುದಿನ ಶಾಲೆಗೆ ಹೋಗುವಾಗ ರವಿಯು ಮನುವಿನಲ್ಲಿ ಬೇಸರದಿಂದ ಹೇಳಿದ ನನಗೆ ಸೈಕಲ್ ತೆಗೆದುಕೊಡಲಿಲ್ಲ. ಯಾಕೆಂದರೆ ಈಗ ಅಪ್ಪನಲ್ಲಿ ಹಣವಿಲ್ಲ. ಆಗ ಮನು ಹೇಳಿದ "ನಗೆ ತೆಗೆದು ಕೊಟ್ಟಿದ್ದಾರೆ. ನೀನು ನನ್ನ ಸೈಕಲ್‌ನಲ್ಲಿ ಬಾ ನಾವು ಒಟ್ಟಿಗೆ ಹೋಗೋಣ. ನೀನು ಹಿಂದೆ ಕುಳಿತುಕೋ" ಎಂದು ಅವನು ಹೇಳಿದ. ಅಂದಿನಿಂದ ಅವರಿಬ್ಬರು ಸೈಕಲಲ್ಲಿ ಹೋಗಲು ಆರಂಭಿಸಿದರು. ಹೀಗೆ ಕೆಲವು ದಿವಸಗಳು ಕಳೆಯಿತು. ಇವರು ಹೋಗುವುದನ್ನು ಬರುವುದನ್ನು ನೋಡಿ ರವಿಯ ಅಪ್ಪನಿಗೆ ಬೇಸರವಾಯಿತು. ಅವರು ಕೆಲಸ ಮಾಡಿದ ಹಣದಲ್ಲಿ ಕೂಡಿಟ್ಟು ರವಿಗೆ ಒಂದು ಸೈಕಲ್ ತೆಗೆದು ಕೊಟ್ಟರು ನಂತರ ಅವರವರ ಸೈಕಲ್‌ನಲ್ಲಿ ಶಾಲೆಗೆ ಹೋಗುತ್ತಿದ್ದರು.

Activate Wi
Go to PC settin


## ಅಮ್ಮ ಹಸಿವು

ಅಮ್ಮ ಅಮ್ಮ ಎಂದು ಮಗು
ಅರಸುತಿದೆ ರೈಲ ಹಳಿಯಲ್ಲಿ
ಆ ಕಂದಮ್ಮನ ಹಸಿವನು
ನೀಗಿಸುವವರು ಯಾರಿಲ್ಲಿ?
ರೈಲು ಹಳಿಯಲಿ ಕುಳಿತು
ಬಿಸಿಲ ಬೇಗೆಯ ಮರೆತು
ಅಮ್ಮ ಹಸಿವು ಎಂಬ ಧ್ಯಾನ
ಆ ಮುಗ್ಧ ಕಂದಮ್ಮನಲಿ
ಎಸೆದ ತಿಂಡಿಗಳನ್ನು ಕೊಳೆತ ಹಣ್ಣುಗಳನ್ನು
ತಿಂದುಂಡು ದುಃಖದಲಿ
ಹಸಿವನು ನೀಗಿಸಿ ಹೇಗೆ
ಕಳೆದೀತು ಆ ಮಗು ತನ್ನ ಜೀವನವನು?
ಹಿಡಿಯಷ್ಟು ಇರುವ ನಮ್ಮ ಕೈಯನು
ಮುಡಿಯಷ್ಟಿರುವ ಆ ಕಂದಮ್ಮನಿಗೆ
ದಾನ ಮಾಡಿ ಸಹಾಯ ಹಸ್ತ ನೀಡೋಣ
ಗೆಳೆಯರೇ ಬನ್ನಿರೆಲ್ಲ

**–ಗೌತಮ್ ಎಸ್**, 9ನೇ ತರಗತಿ,
ಜಿಎಚ್ಎಸ್ಎಸ್ ಪೈವಳಿಕೆನಗರ



**–ಹರ್ಷಕುಮಾರ್ 8**ನೇ ತರಗತಿ,
ಜಿಎಚ್ಎಸ್ಎಸ್ ಪೈವಳಿಕೆನಗರ




**–ಹರ್ಷಲತ 9**ನೇ ತರಗತಿ,
ಜಿಎಚ್ಎಸ್ಎಸ್ ಪೈವಳಿಕೆನಗರ




**–ಮೊಹಮ್ಮದ್ ಹಾಶಿಂ 8**ನೇ
ತರಗತಿ, ಜಿಎಚ್ಎಸ್ಎಸ್ ಪೈವಳಿಕೆನಗರ



**–ಶ್ರೀಪ್ರಿಯ**, 8ನೇ ತರಗತಿ,
ಜಿಎಚ್ಎಸ್ಎಸ್, ಪೈವಳಿಕೆನಗರ



**–ಮೊಹಮ್ಮದ್ ಹಾಶಿಂ**, 8ನೇ ತರಗತಿ,
ಜಿಎಚ್ಎಸ್ಎಸ್, ಪೈವಳಿಕೆನಗರ



**–ರಾಬಿಯತ್ ರಿಫಾ**, 8ನೇ ತರಗತಿ,
ಜಿಎಚ್ಎಸ್ಎಸ್, ಪೈವಳಿಕೆನಗರ



–ಅಬ್ದುಲ್ ರಶೀದ್ ಕೆ.
8ನೇ ತರಗತಿ, ಜಿಎಚ್‌ಎಸ್‌ಎಸ್,
ಪೈವಳಿಕೆನಗರ



–ತನುಶ್ರೀ ಎಸ್. 5ನೇ ತರಗತಿ,
ಜಿಎಚ್‌ಎಸ್‌ಎಸ್, ಪೈವಳಿಕೆನಗರ



–ಕಾರ್ತಿಕ್ ಕೆ. 8ನೇ ತರಗತಿ,
ಜಿಎಚ್‌ಎಸ್‌ಎಸ್, ಪೈವಳಿಕೆನಗರ



–ಫಾತಿಮತ್ ರಿದಾ, 8ನೇ ತರಗತಿ,
ಜಿಎಚ್‌ಎಸ್‌ಎಸ್, ಪೈವಳಿಕೆನಗರ




# ನಮ್ಮ ಸೈನಿಕ

ಯಾವ ತಾಯಿಯ ಮಗನಿವನು
ಎಲ್ಲರ ರಕ್ಷಣೆ ಮಾಡುವವನು
ನಮ್ಮ ದೇಶವನ್ನುಕಾಯುವವನು
ಕಷ್ಟಕ್ಕೆ ಸಹಾಯ ಮಾಡುವವನು
ಹಗಲು ರಾತ್ರಿ ನಮ್ಮನ್ನೆಲ್ಲ ಕಾಯುವವನು
ಪುಣ್ಯ ತಾಯಿಯ ಮಗನಿವನು
ಎಲ್ಲರ ಪ್ರೀತಿಗೆ ಪಾತ್ರನಾಗಿರುವವನು
ನಾವೆಲ್ಲರು ಮೆಚ್ಚಿದ ನಾಯಕನಿವನು
ನಮ್ಮ ದೇಶದ ವೀರ ಸೈನಿಕನಿವನು.


*–ಮೊಹಮ್ಮದ್ ಮುಬಾರಕ್,*
*8ನೇ ತರಗತಿ, ಜಿಎಚ್‌ಎಸ್ ಎಸ್ ಪೈವಳಿಕೆನಗರ*



–ಹರ್ಷಕುಮಾರ್ 8ನೇ ತರಗತಿ,
ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ತನುಶ್ರೀ 5ನೇ ತರಗತಿ,
ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ಫಾತಿಮತ್ ರಿದಾ 8ನೇ
ತರಗತಿ, ಜಿಎಚ್‌ಎಸ್‌ಎಸ್
ಪೈವಳಿಕೆನಗರ



–ಹರ್ಷಲತ ಎಸ್. 9ನೇ ತರಗತಿ,
ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ನಮ್ರತಾ ಟಿ. 8ನೇ ತರಗತಿ,
ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ಪೂಜಾ 8ನೇ ತರಗತಿ,
ಜಿಎಚ್‌ಎಸ್‌ಎಸ್ ಪೈವಳಿಕೆನಗರ




–ಪವನ್‌ರಾಜ್ ಸಿ.ಎಚ್, 8ನೇ ತರಗತಿ, ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ಅಬ್ದುಲ್ ರಶೀದ್ ಕೆ. 8ನೇ ತರಗತಿ, ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ಫಾತಿಮತ್ ರಿದಾ, 8ನೇ ತರಗತಿ, ಜಿಎಚ್‌ಎಸ್‌ಎಸ್, ಪೈವಳಿಕೆನಗರ



–ಕೌಶಿಕ್ ಕೆ, 8ನೇ ತರಗತಿ, ಜಿಎಚ್‌ಎಸ್‌ಎಸ್, ಪೈವಳಿಕೆನಗರ